ಜಯನಗರ	1(ಇನ್‌ಚಾರ್ಜ್)	-	-
ಬನಶಂಕರಿ	1	-	-

ಅ) ಇಲ್ಲ.

ಇ) ಇಲ್ಲ.

ಈ) ಪರಿಶೀಲಿಸಲಾಗುವುದು.

ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯ.

3286 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ಮಹಾಮಂಡಲದ ನಿವ್ವಳ ಆದಾಯವೆಷ್ಟು?

ಆ) ರಾಜ್ಯದಲ್ಲಿರುವ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯವೆಷ್ಟು?

ಇ) ಪ್ರತಿ ಮಾರುಕಟ್ಟೆ ಸಮಿತಿಯಲ್ಲಿ ರಾಜ್ಯ ಮಟ್ಟದ ನಿಯಂತ್ರಿತ ಮಾರುಕಟ್ಟೆ ಬ್ಯಾಂಕ್‌ನ್ನು ಸ್ಥಾಪಿಸಿರುವುದರಿಂದ ರೈತರು ಮತ್ತು ವರ್ತಕರುಗಳಿಗೆ ತಮ್ಮ ವಹಿವಾಟನ್ನು ನಡೆಸಲು ಅನುಕೂಲವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅಂತಹ ಬ್ಯಾಂಕನ್ನು ಸ್ಥಾಪಿಸಲಾಗುವುದೇ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ರಾಜ್ಯ ಮಟ್ಟದಲ್ಲಿ ಮಾರುಕಟ್ಟೆ ಸಮಿತಿಗಳ ಮಹಾ ಮಂಡಳಿ ಯಾವುದು ಇಲ್ಲ. ಆದರೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಎಂಬ ಮಂಡಳಿ ಇದೆ ಸದರಿ ಮಂಡಳಿಗೆ 1989-90ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಬಂದಿರುವ ವಂತಿಗೆ 111.01ಲಕ್ಷ ರೂಗಳಾಗಿರುವುದು ಹಾಗೂ ಸರ್ಕಾರದಿಂದ ರೂ. 16.00 ಲಕ್ಷ ಅನುದಾನವಾಗಿ ಬಂದಿರುವುದು.

ಆ) 852.70 ಲಕ್ಷ ರೂಪಾಯಿಗಳು.

ಇ) ಹೌದು.

ಈ) ಇಂತಹ ಬ್ಯಾಂಕನ್ನು ಸ್ಥಾಪಿಸಲು ಅಜ್ಜಿಬಾಳ ಪೆಗ್ಗಡೆ ನೇತೃತ್ವದಲ್ಲಿ ನೇಮಿಸಿದ ಸಮಿತಿಯು ಶಿಫಾರಸ್ಸು ಮಾಡದೇ ಇರುವುದರಿಂದ ಈ ಪ್ರಸ್ತಾವವನ್ನು ಸರ್ಕಾರ ಕೈಬಿಟ್ಟಿದೆ.

ಗ್ರಾಮಾಂತರ ಪ್ರದೇಶತಗಳಲ್ಲಿ ವಿದ್ಯುಚ್ಛಕ್ತಿ ಮಂಡಲಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡವೆ ಇರುವುದು.

3284 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೆಂಬುದು ನಿಜವೆ?

ಆ) ಈ ದಿಸೆಯಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):